# ಶ್ರೀಮಾತೆಯ ಆಧ್ಯಾತ್ಮಿಕ ವ್ಯಕ್ತಿತ್ವ

ಪ್ರವ್ರಾಜಿಕಾ ಪರಮಪ್ರಾಣಾ

***ಅತ್ಯಂತ ಸಾಮಾನ್ಯ ಮಹಿಳೆಯಂತೆ ಕಾಣಿಸಿಕೊಳ್ಳುವ ಶ್ರೀಮಾತೆಯವರ ಆಧ್ಯಾತ್ಮಿಕ ವ್ಯಕ್ತಿತ್ವವು ಮೊಟ್ಟಮೊದಲು ಶ್ರೀರಾಮಕೃಷ್ಣರಿಂದ ಗುರುತಿಸಲ್ಪಟ್ಟು, ಆನಂತರ ಲೋಕ ವಿಖ್ಯಾತವಾಯಿತು. ಅದರ ಸೂಕ್ಷ್ಮ ಪರಿಚಯವನ್ನು ಮಾಡಿ ಕೊಟ್ಟಿರುವ ಪ್ರವ್ರಾಜಿಕಾ ಪರಮಪ್ರಾಣಾ ಅವರು ಕೊಲ್ಕತಾದ ದಕ್ಷಿಣೇಶ್ವರದಲ್ಲಿರುವ ಶ್ರೀಶಾರದಾಮಠದ ಪ್ರಧಾನ ಕೇಂದ್ರ ದಲ್ಲಿ ಸೇವೆ ಸಲ್ಲಿಸುತ್ತಿರುವರು.***



"**ವೇ**ದಾಂತ ಕೇವಲ ಪಾರಮಾರ್ಥಿಕ ಜ್ಞಾನ ಮಾತ್ರ. ಇಲ್ಲಿ ಈ ಜಗತ್ತನ್ನು ಮಿಥ್ಯ, ಮಾಯಾ ಎಂದು ನಿರಾಕರಿಸಲಾಗಿದೆ. ವೇದಾಂತಿ ಕರ್ಮಗಳಲ್ಲಿ ಲಿಪ್ತನಾಗುವುದಿಲ್ಲ. ವಾಸ್ತವ ಜೀವನದ ಕಷ್ಟ, ಸುಖಗಳ ಎದುರಿಗೆ ವೇದಾಂತ ತತ್ತ್ವಗಳು ಯಾವ ಸಹಾಯಕ್ಕೂ ಬರುವುದಿಲ್ಲ. ಅದ್ವೈತ ವೇದಾಂತ ಕೇವಲ ಸರ್ವ ತ್ಯಾಗಿ, ನಿರ್ಜನವಾಸಿ, ಮುಮುಕ್ಷುಗಳಿಗೆ ಮಾತ್ರ ಸೀಮಿತ ಅನು ಭವ" ಎಂದು ದೂರೀಕರಿಸಲ್ಪಟ್ಟಿದ್ದ ಈ ಶಾಶ್ವತ ಸತ್ಯದ ಸೌಂದರ್ಯ ಹಾಗೂ ಕಾರ್ಯೋಪಯೋಗ್ಯತೆಯನ್ನು ಸಾಧಾರಣ ಜನರ ಎದುರು ಬಹಿರಂಗಗೊಳಿಸಿದರು ಶ್ರೀರಾಮಕೃಷ್ಣರು. ಮೇಲುನೋಟಕ್ಕೆ ಕೇವಲ ದ್ವಂದ್ವ, ಭೇದ, ದೋಷಗಳೇ ಕಂಡರೂ ಸೃಷ್ಟಿಯ ಪ್ರತಿಯೊಂದು ವಸ್ತುವೂ—ಅತಿ ಉಚ್ಚ ಶ್ರೇಣಿಯ ಜೀವಿಯಿಂದ ಹಿಡಿದು ಧೂಳಿನ ಕಣದವರೆಗೂ ಈ ಅನಂತ ಚೈತನ್ಯ ಶಕ್ತಿಯದೇ ಪ್ರಕಾಶವಾಗಿದೆ ಹಾಗೂ ಇದು ಕೆಲವೆಡೆ ಹೆಚ್ಚು, ಕೆಲವೆಡೆ ಕಡಮೆಯಾಗಿ ವ್ಯಕ್ತವಾಗಿದೆ. ಪ್ರತಿಯೊಬ್ಬ ಮನುಷ್ಯನ ಜೀವನದ ಉದ್ದೇಶ ತನ್ನೊಳಗಿನ ಈ ಚೈತನ್ಯವನ್ನು ಜಾಗೃತಗೊಳಿಸುವುದು ಎಂದು ಶ್ರೀರಾಮಕೃಷ್ಣರು ಸಾರಿದರು. ತಮ್ಮ ಶರೀರ ಹಾಗೂ ಮನಸ್ಸುಗಳನ್ನು ಆಧಾರವಾಗಿಟ್ಟುಕೊಂಡು ಹೊರಟ ಈ ಆಧ್ಯಾತ್ಮಿಕ ತರಂಗ ಅನಂತಕಾಲದವರೆಗೆ ಸಾಮಾನ್ಯ ಜನರ ಮಂಗಳಕ್ಕಾಗಿ ಕೆಲಸ ಮಾಡಲಿದೆ ಎಂದು ತಮ್ಮ ಸಾಧನೆಯ ಅಂತ್ಯದಲ್ಲಿ ಅವರಿಗೆ ಗೋಚರವಾಗಿತ್ತು. ಈ ಜವಾಬ್ದಾರಿಯ ಭಾರವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಅವರು ಇಬ್ಬರನ್ನು ಆರಿಸಿಕೊಂಡರು—ಶ್ರೀಶಾರದಾದೇವಿ ಹಾಗೂ ನರೇಂದ್ರನಾಥ.

ಧಾರ್ಮಿಕತೆ ಎಂದರೆ ಏನೆಂದು ತಮಗೆ ಗೊತ್ತಿಲ್ಲ, ಆದರೆ ತಮ್ಮ ಸಾಧನೆಯ ಫಲವಾಗಿ ತಮ್ಮಲ್ಲಿ ಒಂದು ದೊಡ್ಡ ಪರಿವರ್ತನೆ ಕಂಡುಬಂದಿದೆ, ಇತರರ ನೋವು ಕಷ್ಟಗಳಿಗೆ ತೀವ್ರವಾಗಿ ಸ್ಪಂದಿಸುವ ಮನಸ್ಸು ಹಾಗೂ ಎಲ್ಲರ ಮಂಗಳಕ್ಕಾಗಿ ಹಾರೈಸುವ ಹೃದಯ ತಮ್ಮಲ್ಲಿ ಜಾಗೃತವಾಗಿದೆ ಎನ್ನುತ್ತಾರೆ ಸ್ವಾಮೀಜಿ. ಶ್ರೀರಾಮಕೃಷ್ಣರ ಈ ನವವೇದಾಂತ ಮನೆಮನೆ ಗಳಲ್ಲಿ ಆರಾಧಿತವಾಗಬೇಕು, ಈ ಭಾವದಿಂದ ಪ್ರಭಾವಿತರಾದ ವ್ಯಕ್ತಿಗಳು ಪರಸ್ಪರರಲ್ಲಿ ಸಮಭಾವನೆಯಿಂದ ಕೂಡಿ ಶಾಂತಿಯಿಂದ ಬದುಕುವುದನ್ನು ಕಲಿಯಬೇಕೆಂದು ತಿಳಿಸಲು ಸ್ವಾಮೀಜಿ ತಮ್ಮ ಜೀವನವನ್ನು ಆಹುತಿಕೊಟ್ಟು ಶ್ರಮಿಸಿದರು.

ಈ ವೇದಾಂತ ದರ್ಶನದ ಶ್ರೇಷ್ಠ ಉದಾಹರಣೆ ಶ್ರೀಮಾತೆ ಶಾರದಾದೇವಿಯವರ ಜೀವನ. ಆಧ್ಯಾತ್ಮಿಕ ಸಾಧನೆ ಇನ್ನು ಗಿರಿ ಗುಹೆಗಳಲ್ಲಿ ಅಲ್ಲ. ಅದು ದಿನನಿತ್ಯದ ಕೆಲಸಗಳ ನಡುವೆ, ಜೀವ ಸೇವೆಯಲ್ಲಿ, ಸಂಸಾರದ ಎಲ್ಲ ಕೋಲಾಹಲಗಳ ನಡುವೆಯೇ ನಡೆಯಬೇಕು. ಇದನ್ನು ತೋರಿಸಲೆಂದೇ ಶಾರದಾದೇವಿಯವರ ಜೀವನವನ್ನು ಜಗತ್ತಿನ ಎದುರು ನಿಲ್ಲಿಸಲು ಶ್ರೀರಾಮಕೃಷ್ಣರು ಸನ್ನದ್ಧರಾದರು.

ಶ್ರೀಶಾರದಾದೇವಿಯವರಿಗೆ ಬಾಲ್ಯದಿಂದಲೇ ಲೌಕಿಕ ಕೆಲಸ ಕಾರ್ಯಗಳು ಆಧ್ಯಾತ್ಮಿಕ ಸಿದ್ಧಿಗೆ ಸೋಪಾನವಾಗುವಂಥ ಶಿಕ್ಷಣ ಶ್ರೀರಾಮಕೃಷ್ಣರಿಂದ ದೊರೆಯಿತು. ಅವರು ಸಮಯಸಿಕ್ಕಾಗಲೆಲ್ಲಾ ಈ ಜಗತ್ತಿನ ಅನಿತ್ಯತೆ ಹಾಗೂ ತ್ಯಾಗಜೀವನದ ಆದರ್ಶವನ್ನು ಪುಟ್ಟ ಶಾರದೆಗೆ ಮನದಟ್ಟು ಮಾಡಲು ಯತ್ನಿಸುತ್ತಿದ್ದರು. ಅತಿ ಗೌಣವಾದ ಕೆಲಸಗಳನ್ನು ಶ್ರದ್ಧೆಯಿಂದ ಮಾಡುವುದು, ಅತಿಥಿ ಹಾಗೂ ಮನೆಯ ಹಿರಿಯರ ಸೇವೆ, ಕಿರಿಯರೊಂದಿಗೆ ಸೌಹಾ ರ್ದತೆ, ಸಮವಯಸ್ಸಿನವರೊಂದಿಗೆ ಸತ್‌ಚಿಂತನೆ, ನಡೆನುಡಿಗಳಲ್ಲಿ ಸಂಯಮ, ಪ್ರಯಾಣದ ಸಮಯದಲ್ಲಿ ತೆಗೆದುಕೊಂಡ ವಸ್ತುಗಳ ಬಗ್ಗೆ ನಿಗಾವಹಿಸುವುದು, ಎಷ್ಟೋ ಕಡಮೆ ಖರ್ಚಾಗುವಂತೆ ಜೀವ

ವಲ್ಲಿ ಬತ್ತಿಯನ್ನು ಹೊಸೆದಿಡುವ ವಿಧಾನ, ಇತ್ಯಾದಿ ಏನೊಂದೂ ಈ ಅಪೂರ್ವ ಶಿಕ್ಷಣದ ಹೊರತಾಗಿರಲಿಲ್ಲ. ಸಮಾಜದಲ್ಲಿ ನಾವು ವಾಸಿಸುವ ಜನರೊಂದಿಗೆ ಶಾಂತಿಪೂರ್ಣ ಜೀವನ ನಡೆಸಲು ಮೂರು ವಿಧಾನಗಳನ್ನು ಶ್ರೀರಾಮಕೃಷ್ಣರು ಅವರಿಗೆ ತಿಳಿಸಿದರು: ೧) ಕಾಲಕ್ಕೆ ತಕ್ಕಂತೆ ೨) ಜಾಗಕ್ಕೆ ತಕ್ಕಂತೆ ೩) ಜನಕ್ಕೆ ತಕ್ಕಂತೆ ತಮ್ಮನ್ನು ಹೊಂದಿಸಿಕೊಂಡು ಬದುಕುವುದು. ಶ್ರೀಮಾತೆ ತಮ್ಮ ಜೀವನವಲ್ಲಿ ಅಕ್ಷರಶಃ ಇವುಗಳನ್ನು ಪಾಲಿಸಿ ತೋರಿಸಿದರು. ಅಂತಿಮವಾಗಿ ಶ್ರೀರಾಮಕೃಷ್ಣರು ತಾವು ಮಾಡಿದ ತಪಸ್ಸು, ಸರ್ವ ಸಾಧನೆಗಳ ಫಲವನ್ನು ಶ್ರೀಮಾತೆಗೆ ಧಾರೆ ಎರೆದು ನಿಶ್ಚಿಂತರಾದರು.

> **" ಒಳಗಡೆ ಸಾಕ್ಷಾತ್ಕಾರದ ಮಹೋದಧಿ,**
> **ಹೊರಗಡೆ ಸಂಪೂರ್ಣ ಶಾಂತ"**
>
> *—ಶ್ರೀಮಾತೆಯವರನ್ನು ಕುರಿತು ಸ್ವಾಮಿ ಬ್ರಹ್ಮಾನಂದರು*

ಶ್ರೀಮಾತೆಯ ಬಗ್ಗೆ ಶ್ರೀರಾಮಕೃಷ್ಣರು ಒಮ್ಮೆ ಹೇಳಿದ್ದರು, "ಆಕೆ ಬೂದಿ ಮೆತ್ತಿಕೊಂಡ ಬೆಕ್ಕಿನಂತೆ" ಎಂದು. ಅದರ ಸರಿಯಾದ ಬಣ್ಣವೇನೆಂದು ತಿಳಿಯುವುದು ಕಷ್ಟ. ಅವರನ್ನು ಸಾಧಾರಣ ಜನರಿರಲಿ, ರಾಮಕೃಷ್ಣರ ಅಂತರಂಗ ಭಕ್ತರನೇಕರೂ ಅರ್ಥಮಾಡಿಕೊಂಡಿರಲಿಲ್ಲ. ಸ್ವಾಮಿ ವಿವೇಕಾನಂದರು ಶಿವಾನಂದರಿಗೆ ಪತ್ರದಲ್ಲಿ ಬರೆಯುತ್ತಾರೆ : "ಶ್ರೀಮಾತೆ ನಿಜವಾಗಿ ಯಾರು ಎಂದು ನಿಮಗ್ಯಾರಿಗೂ ಅರ್ಥವಾಗಿಲ್ಲ. ಕಾಲಬಂದಾಗ ನಿಧಾನವಾಗಿ ಅದು ನಿಮ್ಮಗಳ ಅರಿವಿಗೆ ಬರುತ್ತದೆ." ಸಂಸಾರದ ದಿನನಿತ್ಯದ ಕೆಲಸಗಳಲ್ಲಿ, ಸುಖದುಃಖಗಳೊಡನೆ ಬೆರೆತು, ಬಳಿಯಿದ್ದವರ ಮನಸ್ಸಿಗೆ ಭ್ರಮೆಹಿಡಿಸಿ ಅಡಗಿಕೊಂಡಿತ್ತು ಅವರ ಆಧ್ಯಾತ್ಮಿಕ ವ್ಯಕ್ತಿತ್ವ. ತುಂಬ ಜಾಗರೂಕನಾದ ಸಾಧಕನು ಮಾತ್ರ ಅವರೊಂದಿಗಿನ ತನ್ನ ಬದುಕನ್ನು ಆಧ್ಯಾತ್ಮಿಕ ಸಾಧನೆಯಾಗಿ ಪರಿಗಣಿಸಿಕೊಂಡು ಧನ್ಯನಾಗುತ್ತಾನೆ. ಉಳಿದವರಿಗೆ ಅವರು ಅಕ್ಕ, ಅಮ್ಮ, ಅತ್ತೆ, ಚಿಕ್ಕಮ್ಮ ಮಾತ್ರ. ಅವರದ್ದು ಎರಡು ರೂಪ—ಮೊದಲನೆಯದು ಅವರೊಬ್ಬ ಹಳ್ಳಿಯ ಹೆಂಗಸು. ಮನೆಯ ಅಂಗಳವನ್ನು ಗುಡಿಸುತ್ತಾರೆ, ರೊಟ್ಟಿ ಮಾಡಲು ಹಿಟ್ಟು ಕಲೆಸುತ್ತಾರೆ, ಆಸ್ತಿಗಾಗಿ ಹೊಡೆದಾಟಕ್ಕಿಳಿದ ಸಹೋದರರ ಜಗಳ ನಿವಾರಿಸಲು ಅವರುಗಳ ನಡುವೆ ನುಗ್ಗಿ, ತಾವೂ ಕೂಗಿ ಬೈದು ಸುಸ್ತಾಗಿ ಹೋಗುತ್ತಾರೆ. ತೀರಿಕೊಂಡ ಕಿರಿಯ ಸಹೋದರನ ಮಗಳು ರಾಧೆಯನ್ನು ಖುಷಿಯಾಗಿಡಲು ದಿನವಿಡೀ ಅವಳದ್ದೇ ಚಿಂತೆ. ಬಹುಜನ ಭಕ್ತರಿಗೆ ಈ ದೃಶ್ಯಗಳನ್ನು ಕಂಡು ಮನಸ್ಸು ಪೆಚ್ಚಾಗಿ ಹೋಗುತ್ತದೆ. ಇದೇನಿದು? ಇವರೇ ಶ್ರೀರಾಮಕೃಷ್ಣ ಪರಮಹಂಸರ ಸಹಧರ್ಮಿಣಿ!? ಘೋರ ಸಂಸಾರಿ! ಬೆಳಿಗ್ಗೆ, ರಾತ್ರಿ ಕೇವಲ "ರಾಧಿ, ರಾಧಿ." ಕಾಲುಗಂಟು ಊದಿದೆ, ಮಲಿನ ವಸ್ತ್ರ, ಕುಂಟಿ ನಡೆಯುತ್ತಾರೆ!

ಕೊಲ್ಕತಾದಿಂದ ಕೆಲವರು ಶ್ರೀಮಾತೆಯನ್ನು ಕಾಣಲೆಂದು ಜಯರಾಂಬಾಟಿಗೆ ಹೋದರು. ಅದೊಂದು ಕುಗ್ರಾಮ. ಇದ್ದಕ್ಕಿದ್ದಂತೆ ಬಂದ ಅತಿಥಿಗಳ ಸೇವೆಗಾಗಿ ಹಾಲನ್ನು ತರಲು ಶ್ರೀಮಾತೆ ಅವರಿವರ ಮನೆಗೆ ಓಡಿ ಒಂದು ಪಾವು ಅರ್ಧ ಪಾವಿನಂತೆ ಹಾಲನ್ನು ಸಂಗ್ರಹಿಸತೊಡಗಿದರು. ನೋಡಲು ಸಾಧಾರಣ ದೃಶ್ಯ. ಹತ್ತಿರ ಹೋದವರು ಅವರಿಂದ ಬೀಳ್ಕೊಳ್ಳುವಾಗ ಹೊಸ ಭಾವನೆಯನ್ನು ಹೊತ್ತು ಅಲ್ಲಿಂದ ಹೊರಬೀಳುತ್ತಾರೆ. ಇದುವರೆಗೆ ಕಂಡರಿಯದ ಜನರು ನಿಮಿಷದಲ್ಲಿ ಅವರ ಸ್ವಂತದವರಾಗಿಬಿಟ್ಟಿದ್ದಾರೆ. ಅಪರಿಚಿತರಾಗಿ ಬಂದವರು ಜಯರಾಂಬಾಟಿಯಿಂದ ಹೊರಡುವಾಗ ನೋಡುತ್ತಾರೆ ಮಾತೆಯ ಕರುಣಾರ್ದ್ರ ಮೂರ್ತಿಯನ್ನು. ಕುಂಟಿ ನಡೆಯುತ್ತಾ ತಮ್ಮ ಹಿಂದೆ ಬರುತ್ತಿದ್ದಾರೆ, ಕಣ್ಣಲ್ಲಿ ನೀರು. ಕುಳಿತ ಎತ್ತಿನಗಾಡಿ ರಸ್ತೆಯ ತಿರುವಿನಲ್ಲಿ ಮರೆಯಾಗುವವರೆಗೂ ಅದೇ ದೃಶ್ಯ—ಮಾತೃಮೂರ್ತಿ, ಕೈ ಜೋಡಿಸಿ ತಮ್ಮಗಳಿಗಾಗಿ ಪ್ರಾರ್ಥಿಸುತ್ತಾ ರಸ್ತೆಯ ಧೂಳಿನಲ್ಲಿ ಒಂದಾಗಿ ನಿಂತಿರುವುದು. ಇದು ಶ್ರೀಮಾತೆಯ ವಿಶಿಷ್ಟ ವ್ಯಕ್ತಿತ್ವ. ಈ ವ್ಯಕ್ತಿತ್ವ ಶ್ರೀಮಾತೆಯ ಸಂನ್ಯಾಸಿ ಶಿಷ್ಯರೊಬ್ಬರ ಮಾತಿನಲ್ಲಿ, "....ಅವರದ್ದೊಂದು ಅಸಾಧಾರಣ ರೂಪವಿದೆ.... ಸಂಸಾರದ ಈ ಎಲ್ಲ ಕೋಲಾಹಲಗಳ ನಡುವೆ ಒಂದಾಗಿದ್ದರೂ ಅವರ ಮನಸ್ಸು ಸರ್ವದಾ ಪ್ರಶಾಂತವಾಗಿರುತ್ತಿತ್ತು. ಅವರು ಈ ಎಲ್ಲದರ ಊರ್ಧ್ವದಲ್ಲಿ ಬಹುಮೇಲೆ ಇದ್ದಾರೆ ಎನ್ನಿಸುತ್ತಿತ್ತು. ಜಗತ್ತು ಬಹುಕೆಳಗೆ ಎಲ್ಲೋ ಬಿದ್ದುಕೊಂಡಿದೆ. ಎಲ್ಲದರ ನಡುವೆ ಓಡಾಡಿಕೊಂಡಿದ್ದಾರೆ. ಆದರೂ ಯಾವುದರಿಂದಲೂ ಲಿಪ್ತರಾಗಿಲ್ಲ... ಈ ಅವಸ್ಥೆಯಲ್ಲಿ ಶ್ರೀಮಾತೆ ತಮ್ಮೆಲ್ಲ ಮಕ್ಕಳ ಮಂಗಳಕ್ಕಾಗಿ ಪ್ರಾರ್ಥಿಸುತ್ತಾರೆ. ಅವರೆಲ್ಲರ ಆಧ್ಯಾತ್ಮಿಕ ಕಲ್ಯಾಣಕ್ಕಾಗಿ, ಈ ಎಲ್ಲ ಕರ್ಮಪಾಶಗಳಿಂದ ಅವರುಗಳು ಮುಕ್ತರಾಗಿ ಭಗವತ್ ಪಥದಲ್ಲಿ ಅಗ್ರಗಾಮಿಗಳಾಗಲು ಅವರನ್ನು ಪ್ರೇರಿಸುತ್ತಾರೆ."

ಶ್ರೀಮಾತೆ ಅತ್ಯಂತ ನಿರಭಿಮಾನಿ ಹಾಗೂ ನಮ್ರರಾಗಿದ್ದರು. ಅವರ ನಡತೆ ಹಾಗೂ ಮಾತುಗಳಲ್ಲಿನ ಸರಳತೆ ಅವರಲ್ಲಿನ ಪ್ರಚಂಡ ಆಧ್ಯಾತ್ಮಿಕ ಶಕ್ತಿಯನ್ನು ಸಾಧಾರಣರ ಕಣ್ಣುಗಳಿಂದ ಸಮರ್ಥವಾಗಿ ಮರೆಯಲ್ಲಿಟ್ಟಿತ್ತು. ಅವರಲ್ಲಿ ಮಾತೃಭಾವವೇ ಪ್ರಧಾನವಾಗಿದ್ದರಿಂದ ಅಧ್ಯಾತ್ಮಗುರುವಿನ ಭಾವ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿರಲಿಲ್ಲ. ಅಲ್ಲದೆ ಅವರು ತಮ್ಮ ಆಧ್ಯಾತ್ಮಿಕ ಭಾವಗಳು ಹೊರಗೆ ಪ್ರಕಟವಾಗದಂತೆ ತುಂಬ ಎಚ್ಚರಿಕೆ ವಹಿಸುತ್ತಿದ್ದರು. ಒಮ್ಮೆ ಭಾವಸಮಾಧಿಯಲ್ಲಿ ತಲ್ಲೀನರಾದ ಅವರನ್ನು ನಂತರ ಪ್ರಶ್ನಿಸಿದಾಗ ಮುಗ್ಧ ಬಾಲಕಿಯಂತೆ ನೋಡುತ್ತಾ ಉತ್ತರವಿತ್ತರು, "ಏನು? ಯಾವಾಗ?.... ಈ ಸೂಜಿಯಲ್ಲಿ ದಾರವನ್ನು ಪೋಣಿಸುವಾಗ ಸ್ವಲ್ಪ ತಲೆ ಸುತ್ತಿದಂತಾಗಿ ಸುಮ್ಮನೆ ಕುಳಿತುಬಿಟ್ಟಿದ್ದೆ" ಎಂದು. ಕೆಲವೊಮ್ಮೆ ಭಕ್ತರೊಂದಿಗೆ ಮಾತನಾಡುವಾಗ ತಮಗೆ ಅರಿಯದಂತೆ ಕೆಲಕೆಲವು ಘಟನೆಗಳನ್ನು ಪ್ರಸ್ತಾಪಿಸಿದ್ದಾರೆ. ತಾವು ಬೃಂದಾವನಕ್ಕೆ ಹೋಗಿದ್ದ ವಿಚಾರ ಬಂದಾಗ ಹೇಳಿದರು : "ಯೋಗಿನ್ ಮಾ ಹಾಗೂ ನಾನು ಎಷ್ಟು ಆನಂದವಾಗಿ ಅಲ್ಲಿ ಜಪಧ್ಯಾನದಲ್ಲಿ ಕಳೆದಿದ್ದೆವು! ಮುಖದ ಮೇಲೆಲ್ಲಾ ನೊಣಗಳು ಕುಳಿತು ಕಚ್ಚಿ ಗಾಯ ಮಾಡಿಬಿಡುತ್ತಿದ್ದವು. ಆದರೂ ನನಗೆ ಗೊತ್ತಾಗುತ್ತಿರಲಿಲ್ಲ." ನಿವೇದಿತಾ ವಿದ್ಯಾಲಯದ ಸೋದರಿ ಸುಧೀರಾಳಿಗೆ ಶ್ರೀಮಾತೆ ಹೇಳಿದರು : "ನನಗೊಮ್ಮೆ

ಎಂಥ ಅವಸ್ಥೆ ಬಂದಿತ್ತೆಂದರೆ ದೇವರ ನೈವೇದ್ಯದಲ್ಲಿರುವ ಇರುವೆಯನ್ನು ತೆಗೆಯಲೂ ಸಾಧ್ಯವಾಗುತ್ತಿರಲಿಲ್ಲ. ಶ್ರೀರಾಮ ಕೃಷ್ಣರೇ ಆ ರೂಪದಲ್ಲಿ ಆಹಾರವನ್ನು ಸೇವಿಸುತ್ತಿದ್ದಾರೆ ಎನ್ನಿಸುತ್ತಿತ್ತು." ಈ ರೀತಿ ಉಚ್ಚ ಅದ್ವೈತ ಭೂಮಿಯಲ್ಲಿ ವಿಹರಿಸಬಲ್ಲ ಅವರು ಮಾತೃಭಾವವನ್ನು ಆಧರಿಸಿ, ತಮ್ಮ ಮನಸ್ಸನ್ನು ಸಂಸಾರಕ್ಕೆ ಎಳೆದು ತಂದು ಎಲ್ಲರೊಂದಿಗೆ ಒಂದಾಗಿ ಹೋಗಲು ಸಮರ್ಥರಾಗಿದ್ದರು.

> **ನನಗೆ ಅಶಾಂತಿಯೆಂಬುದೇ ತಿಳಿಯದು. ದೇವರ ಸಾಂನಿಧ್ಯ ನನ್ನ ಪಾಲಿಗೆ ಕರತಲಾಮಲಕದಂತೆ, ನನಗಿಷ್ಟ ಬಂದಲ್ಲಿ ಭಗವಂತನನ್ನು ನೋಡಬಲ್ಲೆ !**
>
> *—ಶ್ರೀಮಾತೆ ಶಾರದಾದೇವಿ.*

ಶ್ರೀಮಾತೆಯವರ ಜೀವನದಲ್ಲಿ ರಾಧುವಿನ ಪ್ರವೇಶವಾಗುವುದಕ್ಕೆ ಮುಂಚೆ ಶ್ರೀಮಾತೆಯವರ ಸ್ಥಿತಿ ಹೇಗಿತ್ತು ಎಂಬುದನ್ನು ಅವರ ನೇರ ಶಿಷ್ಯರಾದ ಸ್ವಾಮಿ ಶಾರದೇಶಾನಂದರು ವಿವರಿಸುತ್ತಾರೆ : "ಅವರು ಧ್ಯಾನದಲ್ಲಿ ಸಂಪೂರ್ಣ ಮುಳುಗಿರುತ್ತಿದ್ದರು. ಗೋಲಾಪ್-ಮಾ ಮತ್ತು ಯೋಗಿನ್-ಮಾ ಅವರನ್ನು ಪ್ರತಿಮೆಯನ್ನೆಂಬಂತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಎತ್ತಿ ಕೂರಿಸುತ್ತಿದ್ದರು. ಅವರಿಗೆ ದೇಹದ ಪ್ರಜ್ಞೆಯೇ ಇರುತ್ತಿರಲಿಲ್ಲ." ರಾಧುವಿನ ತಾಯಿ ಹೇಳುತ್ತಾಳೆ: "ಶ್ರೀಮಾತೆಯವರು ರಾಧುವಿನ ವಿಷಯದಲ್ಲಿ ಕಾತರರಾಗುವುದಕ್ಕೆ ಮುಂಚೆ ಅವರು ನನಗೆ ಜೀವಂತ ದೇವಿಯಂತೆ ಕಾಣಿಸುತ್ತಿದ್ದರು. ಅವರ ಹತ್ತಿರ ಹೋಗುವುದಕ್ಕೆ ನನಗೆ ಆಗುತ್ತಿರಲಿಲ್ಲ. ಆಗ ಅವರು ಸಂಪೂರ್ಣ ಬೇರೆಯ ವ್ಯಕ್ತಿಯೇ ಆಗಿದ್ದರು. ಅವರು ಪೂಜೆಗೆ ಕುಳಿತಾಗಲಂತೂ ಅವರ ಹತ್ತಿರ ಸುಳಿಯಲೂ ಆಗುತ್ತಿರಲಿಲ್ಲ, ನನಗೆ ಭಯವಾಗುತ್ತಿತ್ತು."

ಇಂತಹ ಅಲೌಕಿಕ ಸ್ಥಿತಿಯಲ್ಲಿ ದೇಹಧಾರಣೆ ಕಷ್ಟಸಾಧ್ಯವೆಂದು ಶ್ರೀರಾಮಕೃಷ್ಣರೇ ಲೋಕಹಿತಕ್ಕಾಗಿ ಶ್ರೀಮಾತೆಯವರ ಜೀವನದಲ್ಲಿ ರಾಧುವಿನ ಪ್ರವೇಶವಾಗುವಂತೆ ಮಾಡಿದರು.

ಹಿಂದೂಧರ್ಮದಲ್ಲಿ ವಿಷದಂತೆ ಸೇರಿಕೊಂಡಿದ್ದ ಜಾತಿಭೇದ, ಮೇಲುಕೀಳೆಂಬ ಭಾವನೆಯ ವಿರುದ್ಧ ೧೯ನೇ ಶತಮಾನದಲ್ಲಿ ಸಮಾಜ ಸುಧಾರಕರನೇಕರು ಆಂದೋಲನವನ್ನೆಬ್ಬಿಸಿದರು. ಹಳೆಯ ಪದ್ಧತಿಗಳ ಮೇಲೆ ಆಕ್ರಮಣ ಮಾಡಿ ಅವುಗಳನ್ನು ಮುರಿಯಲು ಯತ್ನಿಸದೆ ಹೊಸಭಾವವನ್ನು ಅವುಗಳಲ್ಲಿ ತುಂಬಿ ಬದಲಾವಣೆ ತರುವುದು ಶ್ರೀರಾಮಕೃಷ್ಣರ ಭಾವಧಾರೆ. ಶ್ರೀಮಾತೆ ತಾವಿರುವ ಸಮಾಜದ ನಿಯಮಗಳ ಬಗ್ಗೆ ತುಂಬ ಜಾಗರೂಕರಾಗಿದ್ದರೂ ಅವರ ಉದಾತ್ತ ಜೀವನ ದೃಷ್ಟಿಯಲ್ಲಿ ಅಧ್ಯಾತ್ಮಭಾವವೇ ಪ್ರಧಾನವಾಗಿರುವುದರಿಂದ ಕೆಲಕೆಲವು ವಿಚಾರಗಳು ಅವರ ಕೈಮೀರಿ ಹೋಗುತ್ತಿದ್ದವು. "ಭಕ್ತರಿಗೆ ಜಾತಿಯಿಲ್ಲ" ಎಂದು ಅವರು ತಮ್ಮ ಮನೆಗೆ ಬರುತ್ತಿದ್ದ ವಿಭಿನ್ನ ರೀತಿನೀತಿಗಳ ಜನಗಳೊಂದಿಗೆ ಸಮಭಾವದಲ್ಲಿ ಬೆರೆಯುತ್ತಿದ್ದರು. ಎಲ್ಲರ ಊಟದ ನಂತರ ತಾವೇ ಎಂಜಲು ತೆಗೆದು ಸ್ವಚ್ಛ ಮಾಡುತ್ತಿದ್ದರು. ಇದನ್ನು ಕಂಡು ಪ್ರತಿಭಟಿಸಿದವರಿಗೆ ಶಾಂತವಾಗಿ ಉತ್ತರಿಸುತ್ತಿದ್ದರು, "ತಾಯಿ ಮಕ್ಕಳ ಎಂಜಲು ತೆಗೆದರೆ ಆದ ಅನ್ಯಾಯವೇನು?" ಎಂದು. ಶ್ರೀಮಾತೆ ಜಾತಿಬೇಧಗಳನ್ನು ಮೀರುತ್ತಾರೆಂದು ಹಳ್ಳಿಯ ಜಮೀನುದಾರರು ಅವರಿಗೆ ದಂಡವನ್ನೂ ವಿಧಿಸಿದ್ದರು. ಮಹೇತಿ ಶೇಖ್ ಎಂಬ ಮುಸಲ್ಮಾನ ಕೂಲಿಯೊಬ್ಬ ಅವರನ್ನು, "ಅಮ್ಮಾ, ನಮ್ಮ ಹಬ್ಬಗಳಿಗೂ ನೀವು ಸಿಹಿತಿಂಡಿಗಳನ್ನು ಕಳಿಸುತ್ತೀರೇಕೆ? ನೀವು ಹಿಂದು" ಎಂದು ಪ್ರಶ್ನಿಸಿದಾಗ ಶ್ರೀಮಾತೆ ಉತ್ತರಿಸಿದರು: "ನನ್ನ ದೇವರು ಹಾಗೂ ನಿನ್ನ ದೇವರು ಬೇರೆಯೇ? ... ಮಗು ನಮ್ಮ ಹೆಸರುಗಳು ಬೇರೆ ಬೇರೆ. ನಾವೆಲ್ಲಾ ಒಂದೇ." ಒಮ್ಮೆ ಸಿಸ್ಟರ್ ನಿವೇದಿತಾ ಚರ್ಚಿನಲ್ಲಿ ಹೇಳುವ ಕೆಲವು ಇಂಗ್ಲಿಷ್ ಹಾಡುಗಳನ್ನು ಶ್ರೀಮಾತೆಯ ಎದುರು ಹೇಳಿದರು. ಹಾಡನ್ನು ಕೇಳುತ್ತ ಶ್ರೀಮಾತೆಯ ಮನಸ್ಸು ಅಂತರ್ಮುಖವಾಯಿತು. ಅವರು ಸಮಾಧಿಸ್ಥರಾದರು. "ಆಗ ಶಾರದಾದೇವಿಯವರ ಶ್ರೇಷ್ಠ ಧಾರ್ಮಿಕ ಸಂಸ್ಕೃತಿಯ ಅತ್ಯಂತ ಹೃದಯಸ್ಪರ್ಶಿಯಾದ ಅಂಶವು ಪ್ರಥಮ ಬಾರಿಗೆ ನಮಗೆ ಗೋಚರವಾಯಿತು," ಎಂದು ಬರೆಯುತ್ತಾಳೆ ನಿವೇದಿತಾ.

> **ಶ್ರೀಮಾತೆಯವರೊಡನೆ ವಾಸಿಸುವ ಅಪೂರ್ವ ಭಾಗ್ಯಶಾಲಿಗಳಿಗೆ ಧರ್ಮವೆಂಬುದು ಮಧುರ ಸ್ವಾಭಾವಿಕ ಆನಂದದ ವಿಷಯ; ಪಾವಿತ್ರ್ಯ ಮತ್ತು ಧಾರ್ಮಿಕತೆ ಇವು ಸ್ಪರ್ಶವೇದ್ಯ ಸತ್ಯಗಳು ಎಂಬುದು ತಿಳಿದು ಬರುತ್ತದೆ.** *— ಸೋದರಿ ದೇವಮಾತಾ*

ಶ್ರೀಮಾತೆಯೊಂದಿಗೆ ಬದುಕುವುದೇ ಒಂದು ಆಧ್ಯಾತ್ಮಿಕ ಸಾಧನೆ. ಅತಿ ಸಾಮಾನ್ಯರೂ ಅವರ ಒಡನಾಟದಲ್ಲಿ ಮನಸ್ಸನ್ನು ಸುಸಂಸ್ಕೃತಗೊಳಿಸುವ ಶಿಕ್ಷಣ ಪಡೆಯುತ್ತಾರೆ. ಕಸಗುಡಿಸಿ ಪೊರಕೆಯನ್ನು ಎಸೆದು ಹೋಗುತ್ತಿದ್ದ ಮಹಿಳೆಗೆ ಅದನ್ನು ಶ್ರದ್ಧೆಯಿಂದ ಸರಿಯಾದ ಜಾಗದಲ್ಲಿ ಇಡುವಂತೆ ತಿಳಿಸುತ್ತಾರೆ. ಬಾಲಕ ಭಕ್ತನೊಬ್ಬನಿಗೆ ಒಂದೇ ಸಾಲಿನಲ್ಲಿ ಚಾಪೆಗಳನ್ನು ಹಾಕಲು ಸಹನೆಯಿಂದ ಕಲಿಸುತ್ತಾರೆ. ದಿನನಿತ್ಯದ ಆಗುಹೋಗುಗಳ ನಡುವೆ ಇಟ್ಟ ಮನಸ್ಸನ್ನೇ ಭಗವಂತನ ಚಿಂತನೆಯಲ್ಲೂ ತೊಡಗಿಸಬೇಕು. ಅಶಿಕ್ಷಿತ, ಅಶಾಂತ ಮನಸ್ಸು ಭಗವತ್ಪದದಲ್ಲಿ ಏಕಾಗ್ರವಾಗಲಾರದು. ತಮ್ಮ ಜೊತೆ ಇರುವವರು ಪರಸ್ಪರರ ದೋಷಗಳನ್ನು ಕ್ಷಮಿಸಿ ಸಹನೆ, ಸೌಹಾರ್ದಗಳಿಂದ ಬದುಕಬೇಕೆಂದು ಅವರ ನಡವಳಿಕೆಗಳನ್ನು ತಿದ್ದಲು ಯತ್ನಿಸುತ್ತಿದ್ದರು. ಶ್ರೀಮಾತೆ ಹೇಳುತ್ತಾರೆ, "ಸಾಧನೆ ಎಂದರೆ ಭಗವಂತನ ಪಾದಪದ್ಮಗಳಲ್ಲಿ ಯಾವಾಗಲೂ ಮನಸ್ಸನ್ನಿಟ್ಟು ಆತನ ಚಿಂತೆಯಲ್ಲೇ ಮುಳುಗಿಹೋಗುವುದು" ಎಂದು. ನಮ್ಮ ದಿನನಿತ್ಯದ ಕೆಲಸಗಳ ನಡುವೆಯೇ ಭಗವಂತನ ಸ್ಮರಣೆಮಾಡುವ ಉಪಾಯವನ್ನು ಸರಳ ಮಾತಿನಲ್ಲಿ ಅವರು ಕಲಿಸುತ್ತಾರೆ.

ರಾಮಕೃಷ್ಣ ಮಹಾಸಂಘದ ಒಂಭತ್ತನೇ ಅಧ್ಯಕ್ಷರಾದ ಸ್ವಾಮಿ ಮಾಧವಾನಂದರು ಶ್ರೀಮಾತೆಯ ಮಂತ್ರಶಿಷ್ಯರು. ಕಾಲೇಜಿನ ತರುಣನೊಬ್ಬ ಅವರನ್ನು ಪ್ರಶ್ನಿಸಿದನು : "ಸ್ವಾಮೀಜಿ, ಶಾಸ್ತ್ರದಲ್ಲಿ ಹೇಳಿದೆ, ತೈಲಧಾರೆಯಂತೆ ಅವಿಚ್ಛಿನ್ನವಾಗಿ ಮನಸ್ಸಿನಲ್ಲಿ ಈಶ್ವರ

ಚಿಂತನೆ ನಡೆಯುತ್ತಿರಬೇಕೆಂದು, ಅದು ಹೇಗೆ ಸಾಧ್ಯ? ದಿನನಿತ್ಯದ ಕೆಲಸಗಳ ಒತ್ತಡವಂತೂ ಇದ್ದೇ ಇರುತ್ತದೆ." ಮಾಧವಾನಂದರು ನೇರವಾಗಿ ಉತ್ತರಿಸದೆ ತಮ್ಮೆದುರಿಗಿನ ಒಂದು ಕಾಗದವನ್ನೆತ್ತಿ ಅದರಲ್ಲಿರುವ ಒಂದು ಗೆರೆಯತ್ತ ಬೆರಳನ್ನಿಟ್ಟು ಅವನನ್ನು ಕೇಳಿದರು :"ಇದೇನು?" ತರುಣ: "ಅದೊಂದು ಗೆರೆ ಸ್ವಾಮೀಜಿ." ಸ್ವಾಮೀಜಿ : "ಯಾವ ರೀತಿಯ ಗೆರೆ?" ತರುಣ: "ಸರಳ ರೇಖೆ." ಸ್ವಾಮೀಜಿ : "ಸರಿಯಾಗಿ ನೋಡು." ತರುಣ : "ಚುಕ್ಕೆಗಳಿಂದಾದ ಗೆರೆ (dotted line) ಸ್ವಾಮೀಜಿ." ಸ್ವಾಮೀಜಿ : "ಸರಿಯಾಗಿ ಹೇಳಿದೆ. ಈಗ ನೋಡಿದೆಯಾ ಇದೊಂದು ಚುಕ್ಕೆಗಳನ್ನಿಟ್ಟಿರುವ ಗೆರೆ. ಅಂದರೆ ಪ್ರತಿ ಚುಕ್ಕೆಗಳ ನಡುವೆ ಸ್ವಲ್ಪ ಖಾಲಿ ಜಾಗವಿದೆ. ಆದರೂ ಇದೊಂದು ಸರಳರೇಖೆಯಂತೇ ಕಾಣುತ್ತದೆ. ಹೀಗೆಯೇ ನೀನೂ ಕೆಲಸಗಳ ಮಧ್ಯಮಧ್ಯದಲ್ಲಿ ನೆನಪಿಸಿಕೊಂಡು ನೆನಪಿಸಿ ಕೊಂಡು ಈಶ್ವರನ ಚಿಂತೆ ಮಾಡಿದರೂ ನಿರಂತರವಾಗಿ ಮಾಡಿದ ಜಪದ ಫಲವೆ ಸಿಕ್ಕುತ್ತದೆ. ಇದನ್ನೇ ನಮ್ಮ ಶ್ರೀಮಾತೆ ನಮಗೆ ಕಲಿಸಿದ್ದಾರೆ. ಅವರು ನನಗೊಮ್ಮೆ ಹೇಳಿದರು: 'ಮಗು, ಸಂಸಾರದ ಕೆಲಸಗಳನ್ನು ಬಿಟ್ಟುಬಿಡುವಂತಿಲ್ಲ. ಅಕ್ಕಿಯನ್ನು ಒಲೆಯ ಮೇಲಿಟ್ಟೆ, ನೀರು ಕುದಿಯುತ್ತಿದೆ, ಬೇಯಲು ಸ್ವಲ್ಪ ಸಮಯ ಬೇಕು, ಈ ಸಮಯದಲ್ಲಿ ಅಲ್ಲೇ ಮನಸ್ಸಿನಲ್ಲೇ ಜಪ ಮಾಡಿದೆ. ಮತ್ತೆ ಸಾರು ಮಾಡಬೇಕು, ಬೇಳೆಯನ್ನು ಕುದಿಯಲು ಇಟ್ಟು ಅಲ್ಲೇ ಕುಳಿತು ಭಗವಂತನ ಚಿಂತೆ ಮಾಡಿದೆ. ಸ್ವಲ್ಪ ಹೊತ್ತಿನ ನಂತರ ಸಾರಿನ ಪಾತ್ರೆ ಇಳಿಸಿ ಮತ್ತೆ ಕೆಲವು ಕ್ಷಣ ಸ್ಮರಣೆ ಮನನ ಗಳಲ್ಲಿ ಕಳೆದೆ. ಹೀಗೇ ನನ್ನ ಕೆಲಸ ಹಾಗೂ ಜಪಧ್ಯಾನ ವಪ್ಪಾ...' " ಈ ಮಾತುಗಳನ್ನು ಹೇಳುತ್ತಿದ್ದಂತೆ ಮಾಧವಾನಂದರ ದೃಷ್ಟಿ ಅಂತರ್ಮುಖವಾಗತೊಡಗಿತು.

"ದಿನವೆಲ್ಲ ಹೀಗೆ ಭಗವಂತನ ಸ್ಮರಣೆ ಮಾಡುವ ಪ್ರಯತ್ನ ಮಾಡುತ್ತಿದ್ದರೂ ಬೆಳಿಗ್ಗೆ ಹಾಗೂ ಸಂಜೆ ನಿಷ್ಠೆಯಿಂದ ನಿಯಮಿತ ಸಮಯದಲ್ಲಿ ಜಪಧ್ಯಾನ ಮಾಡಲೇಬೇಕು. ಇದರಿಂದ ಮನಸ್ಸಿನ ಗತಿಯನ್ನು ಅರಿಯಲು ಸಾಧ್ಯ" ಎಂದು ಶ್ರೀಮಾತೆ ಹೇಳುತ್ತಿದ್ದರು. ಕಟ್ಟಕಡೆಯಲ್ಲಿ ಅವರು ಒತ್ತುಕೊಡುತ್ತಿದ್ದುದು ಶರಣಾಗತಿಯ ಮೇಲೆ. ಮನಸ್ಸಿನ ಸೂಕ್ಷ್ಮಾತಿಸೂಕ್ಷ್ಮ ಸ್ತರಗಳಲ್ಲಿ ಅವಿತಿರುವ ಅಹಂಕಾರ ಹಾಗೂ ಕಾಮನೆಗಳ ಪ್ರಭಾವದಿಂದಾಗಿ ಮನುಷ್ಯ ಕೇವಲ ತನ್ನ ಪ್ರಯತ್ನದಿಂದಲೇ ಮುಕ್ತನಾಗಲಾರ, ಹಾಗಾಗಿ ಭಗವಂತನ ಶ್ರೀಚರಣದಲ್ಲಿ ಶರಣಾಗಿ ಕೃಪೆಗಾಗಿ ಪ್ರಾರ್ಥಿಸಲು ಹೇಳುತ್ತಾರೆ.

ಶ್ರೀಮಾತೆ ಶಾಸ್ತ್ರಗಳನ್ನು ವ್ಯಾಖ್ಯಾನಿಸಿ ಎಂದೂ ಹೇಳಿದವ ರಲ್ಲ. ಅವರ ಜೀವನವೆ ಶಾಸ್ತ್ರದ ಉತ್ತಮ ನಿದರ್ಶನ. ಶ್ರೀರಾಮಕೃಷ್ಣರ ಸಮನ್ವಯ ಭಾವದ ಪೂರ್ಣಪ್ರಕಾಶ ಶ್ರೀಮಾತೆ ಯವರಲ್ಲಾಗಿದೆ. "ಬ್ರಹ್ಮ ಸತ್ಯ ಜಗತ್ ಮಿಥ್ಯ" ಎಂಬ ನೇತಿ ವಾಚಕ ವೇದಾಂತ ಶ್ರೀಮಾತೆಯವರಲ್ಲಿ "ಇತಿ" ವಾಚಕವಾಗಿದೆ. ಸೃಷ್ಟಿಯ ಹಿಂದಿನ ಚೈತನ್ಯಶಕ್ತಿಯ ಅನುಭವ ಪಡೆದ ಅವರು ಜಗತ್ತನ್ನು ಮಿಥ್ಯೆ ಎಂದು ಅಲ್ಲಗಳೆಯದೆ ತಮ್ಮ ಸ್ವಂತದ್ದನ್ನಾಗಿ ನೋಡಿದರು. "ಶ್ರೀರಾಮಕೃಷ್ಣರು ಸಂಪೂರ್ಣವಾಗಿ ಅದ್ವೈತ ವಾದಿ... ನೀವೇಕೆ ಅದ್ವೈತವನ್ನು ಅನುಸರಿಸಬಾರದು? ರಾಮ ಕೃಷ್ಣರ ಶಿಷ್ಯರೆಲ್ಲ ಅದ್ವೈತಿಗಳೇ" ಎನ್ನುವ ಶ್ರೀಮಾತೆ ಭಕ್ತಿಭಾವ ವನ್ನು ಆಧರಿಸಿ ಸಾಧಾರಣ ಜನರು ಈಶ್ವರನಲ್ಲಿ ಶರಣಾಗತಿ, ತನ್ಮಯತೆಗಳಿಂದ ಮನಸ್ಸನ್ನು ಪವಿತ್ರಗೊಳಿಸುವ ಸುಲಭ ಮಾರ್ಗ ವನ್ನು ತೋರಿಸುತ್ತಾರೆ. ಹಾಗೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರೆದ ಸಾಧಕರಿಗೆ ದ್ವೈತಭಾವವನ್ನು ಮೀರಿ ಸರ್ವೋ ತ್ಕೃಷ್ಟವಾದ ಅದ್ವೈತಭಾವದಲ್ಲಿ ವಿರಾಜಿಸಲು ಪ್ರೇರಿಸುತ್ತಾರೆ.

ಶ್ರೀಮಾತೆಯವರನ್ನು ಸ್ವಾಮಿ ವಿವೇಕಾನಂದರು "ಜೀವಂತ ದುರ್ಗಾ" ಎಂದಿದ್ದಾರೆ. ಅವರಲ್ಲಿ ಶರಣಾಗಿ ಧನ್ಯರಾಗಲು ಕರೆ ನೀಡಿ ಹೇಳಿದ್ದಾರೆ : ".... ಎಲ್ಲರಿಗೋಸ್ಕರ ನಿಃಸ್ವಾರ್ಥ ಪ್ರೀತಿ ಹಾಗೂ ಎಲ್ಲರ ನೋವಿಗೆ ಸ್ಪಂದಿಸುವ ಸೂಕ್ಷ್ಮ ಮನಸ್ಸು ಅವರದ್ದು. ನೀರವವಾಗಿ ಮನಸ್ಸಿನಲ್ಲೇ ಕೃಪೆಗಾಗಿ ಪ್ರಾರ್ಥಿಸಿ. ಯಾವಾಗಲೂ ಅಲೌಕಿಕ ಸ್ತರದಲ್ಲಿಯೆ ನೆಲೆಸಿರುವ ಅವರು ನಮ್ಮ ಮನಸ್ಸನ್ನು ಅರಿಯಬಲ್ಲರು. ಅವರು ಅಂತರ್ಯಾಮಿ." ❖

**ಒಂದು ದಿನ ಶ್ರೀಮಾತೆಯವರು ದಕ್ಷಿಣೇಶ್ವರದ ನಹಬತ್ತಿನಲ್ಲಿ ವಾಸಿಸುತ್ತಿರುವಾಗ ಯೋಗೀನ್‌ಮಾಗೆ ಹೇಳಿದರು: "ಅವರಿಗೆ (ಶ್ರೀರಾಮಕೃಷ್ಣರಿಗೆ) ಹೇಳು, ನನಗೂ ಏನಾದರೂ ಭಾವ-ಗೀವ ಲಭಿಸಲೆಂದು. ಅಲ್ಲಿ ಯಾವಾಗಲೂ ಜನರಿರುತ್ತಾರೆ, ನನಗೆ ಹೇಳಲು ಅವಕಾಶವೇ ದೊರೆಯುವುದಿಲ್ಲ." ಯೋಗೀನ್‌ಮಾ ಮರುದಿನ ಬೆಳಿಗ್ಗೆ ಶ್ರೀರಾಮಕೃಷ್ಣರು ಕೊಠಡಿಯಲ್ಲಿ ಒಬ್ಬರೇ ಇರುವಾಗ ಈ ವಿಷಯವನ್ನು ಪ್ರಸ್ತಾಪಿಸಿದಳು. ಶ್ರೀರಾಮಕೃಷ್ಣರು ಕೇಳಿಯೂ ಮರುಮಾತನಾಡದೆ ಸುಮ್ಮನೆ ಗಂಭೀರವಾಗಿ ಕುಳಿತುಬಿಟ್ಟರು. ಮತ್ತೆ ಮಾತನಾಡಲು ಧೈರ್ಯವಾಗದೆ ಯೋಗೀನ್ ಮಾ ನಹಬತಿಗೆ ಹಿಂದಿರುಗಿದಳು. ಶ್ರೀಮಾತೆಯವರು ಒಳಗೆ ಪೂಜೆ ಮಾಡುತ್ತಿದ್ದರು. ಬಾಗಿಲು ಸ್ವಲ್ಪ ಮಾತ್ರ ತೆರೆದಿತ್ತು. ಯೋಗೀನ್‌ಮಾ ಬಾಗಿಲ ಮೂಲಕ ಇಣಿಕಿ ನೋಡಿದಳು. ಶ್ರೀಮಾತೆ ಯವರು ಭಾವಾವೇಶದಲ್ಲಿದ್ದರು. ಒಮ್ಮೆ ನಗುತ್ತಿದ್ದರು, ಮತ್ತೊಮ್ಮೆ ಅಳುತ್ತಿದ್ದರು, ಎರಡೂ ಕಣ್ಣುಗಳಿಂದ ನೀರು ಧಾರಾಕಾರ ವಾಗಿ ಹರಿಯುತ್ತಿತ್ತು. ಸ್ವಲ್ಪ ಹೊತ್ತು ಈ ಸ್ಥಿತಿಯಲ್ಲಿದ್ದು ಅನಂತರ ಸಮಾಧಿಸ್ಥರಾಗಿ ಸ್ಥಿರವಾಗಿ ಕುಳಿತರು. ಆಗ ಯೋಗೀನ್‌ಮಾ ಬಾಗಿಲು ಮುಚ್ಚಿ ಹೊರಟುಹೋದಳು. ಬಹಳ ಹೊತ್ತಿನ ನಂತರ ಮತ್ತೆ ಬಂದಾಗ ಶ್ರೀಮಾತೆ ಕೇಳಿದರು, "ಈಗ ತಾನೆ ಬಂದೆಯಾ?" ಎಂದು. "ತಾಯಿ, ನನಗೆ ಭಾವವೇ ಆಗಲಿಲ್ಲವೆಂದು ಹೇಳಿದೆಯಲ್ಲಮ್ಮ?" ಎಂದು ಯೋಗೀನ್‌ಮಾ ಹಂಗಿಸಿದಳು. ಶ್ರೀಮಾತೆ ಯವರು ಮುಗುಳ್ನಕ್ಕರು ಅಷ್ಟೇ. ಆಗ ಯೋಗೀನ್‌ಮಾಗೆ ತಿಳಿಯಿತು ಶ್ರೀಮಾತೆಯವರು ಯಾವಾಗಲೂ ಭಗವದ್ಭಾವದಲ್ಲಿಯೇ ಇರುತ್ತಾರೆ ಎಂದು.** ❐